ಬಹುಬೇಗ ಅಡುಗೆಮನೆ ಹೊಕ್ಕುಬಿಟ್ಟಿರುತ್ತಿದ್ದರು. ಅದನ್ನೊಂದು ಮುಖ್ಯ ಕಾರ್ಯಸ್ಥಾನವನ್ನಾಗಿ ಮಾಡಿಕೊಂಡು ಅಲ್ಲಿಂದಲೇ ತಮ್ಮ ರಾಜ್ಯಭಾರ ಮಾಡುತ್ತಿದ್ದರು. ಒಡವೆ ವಸ್ತುಗಳ ವಿಚಾರ ಬೇರೆ. ಆಸ್ತಿ ಅಂತಸ್ತು ಎಲ್ಲವೂ ಅಡುಗೆಮನೆಯ ಆಡಳಿತದ ಮುಂದೆ ನಗಣ್ಯ. ಇದೊಂಥರಾ ಲವ್–ಹೇಟ್ ಸಂಬಂಧ.

ಮಲೆನಾಡಿನ ಹೆಣ್ಣುಮಕ್ಕಳು ಬಹುಶಃ ಸ್ವಭಾವತಃ ಮೆದು ಆದರೂ ಗಟ್ಟಿ ವ್ಯಕ್ತಿತ್ವ ಉಳ್ಳವರು. ಅಡುಗೆಮನೆಯಲ್ಲಿ ನಿಡುಸುಯ್ಯುತ್ತಾ ರುಬ್ಬುತ್ತಾ, ಕಡೆಯುತ್ತಾ, ಬೇಯುತ್ತಾ, ಬೇಯಿಸುತ್ತಾ ಅಲ್ಲಿಂದಲೇ ಸಕಲ ಸಂಸ್ಕೃತಿಯ ವಾರಸುದಾರಿಕೆಯನ್ನು ಮಕ್ಕಳಿಗೆ, ಅದರಲ್ಲೂ ವಿಶೇಷವಾಗಿ ಹೆಣ್ಣುಮಕ್ಕಳಿಗೆ ದಾಟಿಸುತ್ತಾರೆ.

ಮಳೆ ಕಡಿಮೆ ಇರುವುದಕ್ಕೋ ಏನೋ ಅಥವಾ ಒಣ ಪ್ರದೇಶ ಅಂತಲೋ ಬಯಲುಸೀಮೆಯ ಹೆಣ್ಣುಗಳು ಬೆಂಕಿಯ ಮುಂದೆ ಹುರಿದು ಸಿಡಿಸುತ್ತಾ, ಖಾರ ಏರಿಸುತ್ತಾ ಅಡುಗೆಮನೆ ಒಳಗೆ ತಾವಲ್ಲದೆ ತಮ್ಮ ಜೊತೆ ಮತ್ತೆಲ್ಲರನ್ನೂ ಸೇರಿಸಿಕೊಂಡು ಕಟಕ ರೊಟ್ಟಿ ಆಗಿಸುತ್ತಾರೆ. ಅದನ್ನ ಪ್ರಶ್ನೆ ಮಾಡಿದರೆ ಎಲ್ಲವೂ ತಮ್ಮ ಕುತ್ತಿಗೆಗೇ ಬಂದೀತು ಎನ್ನುವ ಹೆದರಿಕೆಯಲ್ಲಿ ಹಿಂದಿನ ಪೀಳಿಗೆಯ ಗಂಡಸರೂ ಹೆಚ್ಚು ಮಾತಾಡಲಿಕ್ಕೆ ಹೋಗಿಲ್ಲ ಅನ್ನಿಸುತ್ತೆ.

ಯಾಕೆ ಅಂದೀರಾ? ಕೆಲವು ವರ್ಷಗಳ ಹಿಂದಿನವರೆಗೂ ಸಾಮಾನ್ಯವಾಗಿ ಕುಟುಂಬ ಸಮೇತ ಯಾರದ್ದಾದರೂ ಮನೆಗೆ ಹೋದರೆ ಗಂಡಸರು ಪಡಸಾಲೆಯಲ್ಲಿಯೋ, ಹಾಲ್‌ನಲ್ಲಿಯೋ ಅಥವಾ ಔಪಚಾರಿಕ ಚರ್ಚೆಗಳು ನಡೆಯುವ ಜಾಗದಲ್ಲಿ ಕುಳಿತು ಚಹಾ ಆರ್ಡರ್ ಮಾಡುತ್ತಿದ್ದರು. ಅಲ್ಲಿನ ರಾಜಕೀಯ ಮನೆಯಂಗಳಕ್ಕೆ ಹೊರತಾದದ್ದು. ಹೆಣ್ಣುಮಕ್ಕಳು ಹೋಗುತಿದ್ದುದು ಸೀದಾ ಅಡುಗೆಮನೆಗೇ! ಅಲ್ಲಿ ಹೋದ ತಕ್ಷಣ ಪೀಠಿಕೆಯ ಮಾತಿಲ್ಲ... ಸೀದಾ ಸಾದಾ ಮನ್ ಕಿ ಬಾತ್ ಹೊರಗೆ ಬರುತ್ತಿದ್ದವು. ಇಲ್ಲಿನ ರಾಜಕೀಯ ನೇರ ದಿಟ್ಟ ನಿರಂತರ. ಈಗ ಇದೆಲ್ಲಾ ಕಾಲದ ಕಾರಣಕ್ಕೆ ಬದಲಾಗಿರಬಹುದು.

ನನ್ನ ಅಜ್ಜಿ ಹೇಳುತ್ತಿದ್ದ ಹಾಗೆ ನನ್ನ ಅಮ್ಮ 'ಸಿಂಗಲ್ ನಂಬರ್' ವಯಸ್ಸಿದ್ದಾಗ ಅಡುಗೆಮನೆ ಸೇರಿದವರು. ಅಂದರೆ ಆಗ ಎಂಟೋ ಒಂಬತ್ತೋ ವರ್ಷ ಇರಬೇಕು ಎನ್ನುವುದು ಇಬ್ಬರ ಅಂದಾಜು. ಇದು ಸತ್ಯ ಇದ್ದರೂ ಇರಬಹುದು. ಹೊಲ ಮನೆ ಇದ್ದಂಥ ಮನೆತನಗಳಲ್ಲಿ ರೊಟ್ಟಿ ಬಡಿಬಡಿದು ಏರಿಸಿದ ಮರುಕ್ಷಣ ಮುದ್ದೆ ತಿರುತಿರುವಿ ಕೈಬಟ್ಟಲಿಗೆ ಹಾಕಿ ದುಂಡಗೆ ಮಾಡಿ ಪಾತ್ರೆಗಳಲ್ಲಿ ಪೇರಿಸಿ ಇಡುತ್ತಿದ್ದರಂತೆ.

ಧಗಧಗನೆ ಉರಿವ ಬೆಂಕಿ, ಕೆಂಡ, ಮೆಣಸಿನಕಾಯಿ ಘಾಟು, ಎಣ್ಣೆ, ಮಸಿ, ಚಾಕು, ಈಳಿಗೆ ಮಣೆ, ಕೊಚ್ಚು–ಹೆಚ್ಚು ಕಡಿ ಎಲ್ಲ ಮಾಡಿದ ಮೇಲೆ ಹೊರಗೆ ಬರುವ ಹೆಂಗಸು ತತ್‌ಕ್ಷಣ ಮನೋರಮೆಯ ಹಾಗೋ ಕಾಳಿದಾಸನ ಶಾಕುಂತಲಳ ವರ್ಣನೆಯಂತೋ (ಅಥವಾ ಯಾವುದೇ ಪ್ರಸ್ತುತ ಹೀರೋಯಿನ್ನುಗಳ ಹಾಗೋ) ಇರಬೇಕು ಎಂದು ಭಾವಿಸುವುದು ಎಷ್ಟು ಅತಾರ್ಕಿಕ ಸಂಗತಿ ಎಂದು ಪುಸ್ತಕಗಳನ್ನು ಓದಿ ಓದಿ ಬಿಸಾಡುವಷ್ಟು ಚರ್ಚೆಗಳನ್ನು ಮಾಡುವ ಸಮಾಜಕ್ಕೆ (ವಿಶೇಷವಾಗಿ ಪಡಸಾಲೆಯಲ್ಲಿ ಕುಳಿತಿರುವ ಗಂಡಸರಿಗೆ ಅಂತ ಹೇಳಬೇಕಿಲ್ಲ ತಾನೇ?) ಅರ್ಥವೇ ಆಗದಿರುವುದು ವಿಚಿತ್ರ ಅನ್ನಿಸುತ್ತೆ.

ಅಮ್ಮ ಅನ್ನುವ ಪದ ಅಡುಗೆಮನೆಯ ಜೊತೆ ಸಮೀಕರಿಸಿಕೊಂಡಿದೆ ಅನ್ನುವಷ್ಟು ಅಮ್ಮನ ಮೇಲೆ ನಮ್ಮ ಅಡುಗೆಯ ಸಂಸ್ಕೃತಿ, ಪದ್ಧತಿ, ರೀತಿ–ನೀತಿ, ಅಡುಗೆಮನೆಯ ನೋಟ, ಘಮಗಳು, ವಾಸನೆಗಳು, ಪರಿಮಳಗಳು, ರುಚಿ ಮೊಗ್ಗುಗಳ ಸಂವೇದನೆಗಳು, ಅದರ ಮೂಲಕ ಮನಸ್ಸಿನಲ್ಲಿ ಮೂಡುವ ಭಿತ್ತಿ, ಮೇಲಿಂದ ಮೇಲೆ ದಾಖಲಾಗುವ ರುಚಿಯ ನೆನಪು, ಮತ್ತ್ಯಾವಾಗಲೋ ಅದೇ ರುಚಿಯ ಊಟ